**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| ಸಿಸಿ:ನಂಬರ್ 719/2014 | ಸಿಡಬ್ಲ್ಯೂ-1 | ಪಿ.ಡಬ್ಲ್ಯೂ-1 |
|---|---|---|

ಸಾಕ್ಷಿದಾರರ ಹೆಸರು : ನಾಗರಾಜೇಗೌಡ
ತಂದೆಯ ಹೆಸರು : ತಿಮ್ಮೇಗೌಡ
ವಯಸ್ಸು : 57 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಅಗಸರಹಳ್ಳಿ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.
ದಿನಾಂಕಃ 21.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎನ್.ಎನ್ ವಕೀಲರಿಂದ**

ಚಾಸಾ 2 ಕೃಷ್ಣೇಗೌಡ ನನ್ನ ಭಾವನಾಗಬೇಕು ಎಂದರೆ ಸರಿ. ಚಾಸಾ 3 ನಾಗರತ್ನಮ್ಮ ನನ್ನ ಅಕ್ಕ ಎಂದರೆ ಸರಿ. ಚಾಸಾ 4 ರಿಂದ 7 ರವರಾದ ಗೋವಿಂದೇಗೌಡ, ರಾಮೇಗೌಡ, ಶಿವಣ್ಣೇಗೌಡ ಮತ್ತು ಸಣ್ಣತಿಮ್ಮೇಗೌಡರವರ ಜಮೀನು ಕೃತ್ಯ ನಡೆದಿದೆ ಎಂದು ಹೇಳಿದ ಜಮೀನಿನ ಅಕ್ಕಪಕ್ಕದಲ್ಲಿ ಇರುವುದಿಲ್ಲ ಎಂದರೆ ಸರಿ. ಮುಖ್ಯವಿಚಾರಣೆಯಲ್ಲಿ ಹೇಳಿದ ಗಲಾಟೆಯ ಪೂರ್ವದಲ್ಲಿ ಆರೋಪಿತರು ಹಾಗೂ ಚಾಸಾ 2 ಕೃಷ್ಣೇಗೌಡರವರು ಪರಸ್ಪರ ಚೆನ್ನಾಗಿ ಮಾತಾಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿ ಕುಳ್ಳೇಗೌಡ ಚಾಸಾ 2 ಕೃಷ್ಣೇಗೌಡರವರಿಗೆ ಜಮೀನಿನ ಕ್ರಯ ಕರಾರನ್ನು ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಈಗ ಹಾಲಿ ನಾವು ಮತ್ತು ಆರೋಪಿತರು ಪರಸ್ಪರ ಮಾತನಾಡುತ್ತಿಲ್ಲ ಎಂದರೆ ಸರಿ. ಆರೋಪಿತರು ನಮಗೆ ಸರ್ವೆ ನಂ. 27/10 ಜಮೀನು ಬಿಟ್ಟುಕೊಟ್ಟಿದ್ದರೆ ಈ ಪ್ರಕರಣ ದಾಖಲಾಗುತ್ತಿರಲಿಲ್ಲ ಎಂದರೆ **ಸರಿ.** ಚಾಸಾ 2 ಕೃಷ್ಣೇಗೌಡರವರ ಬಟ್ಟೆ ರಕ್ತಸಿಕ್ತವಾಗಿದ್ದವು ಅವುಗಳನ್ನು ನಾವು ಪೊಲೀಸರಿಗೆ ನೀಡಿರಲಿಲ್ಲ. ದೂರನ್ನು ನಾನೇ ಬರೆಸಿರುತ್ತೇನೆ. ದೂರನ್ನು ಪೊಲೀಸರು ಬರೆದಿರುತ್ತಾರೆ. ಯಾವ ಪೊಲೀಸರು ಎಂದು ನನಗೆ ಹೇಳಲು ಆಗುವುದಿಲ್ಲ. ಚಾಸಾ 2 ಕೃಷ್ಣೇಗೌಡರವರಿಗೆ ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ಮುದ್ದೆಮಾಲು 1 ರಂತಹ ಕುಡುಗೋಲು ಎಲ್ಲರ ಮನೆಯಲ್ಲೂ ಸಾಮಾನ್ಯವಾಗಿ ಇರುತ್ತದೆ ಎಂದರೆ ಸರಿ. ಆರೋಪಿತರ ಹೆಸರಿನಲ್ಲಿರುವ ಪಹಣಿ ಪತ್ರಿಕೆಯನ್ನು ಯಾವುದೇ ಪ್ರಾಧಿಕಾರದ ಸಮಕ್ಷಮ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಚಾಸಾ 2 ರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತೊಂದರೆ ಇತ್ತ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆರೋಪಿತರು ನನಗೂ ಕೂಡ ಹಲ್ಲೆ ಮಾಡಿದ್ದರು ಎಂದು ನುಡಿದಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆಯನ್ನು ಪಡೆದಿರುವುದಿಲ್ಲ. ಚಾಸಾ 2 ಕೃಷ್ಣೇಗೌಡ ನನ್ನ ಭಾವನಾದ ಕಾರಣ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಎಲ್ಲೋ ಆದ ಗಾಯವನ್ನು ಬಳಸಿಕೊಂಡು ಪೊಲೀಸರೊಂದಿಗೆ ಷರೀಕಾಗಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಘಟನೆಯಾದ ಮರುದಿವಸ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಯಾವ ಪೊಲೀಸರು ಬಂದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪಂಚನಾಮೆಗೆ ನಾನು ಒಬ್ಬನೇ ಸಹಿ ಮಾಡಿರುತ್ತೇನೆ. ಬೇರೆ ಯಾರು ಸಹಿ ಮಾಡಿರುವುದಿಲ್ಲ. ಯಾವುದೇ ಘಟನೆ ಆಗದಿದ್ದರೂ ಕೂಡ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

**(ಶಮೀರ್.ಪಿ.ನಂದ್ಯಾಲ್)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.

## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,
## ಕೆ. ಆರ್. ಪೇಟೆ.

| ಸಿಸಿ:ನಂಬರ್ 719/2014 | ಸಿಡಬ್ಲ್ಯೂ-1 | ಪಿ.ಡಬ್ಲ್ಯೂ-1 |
|---|---|---|

ಸಾಕ್ಷಿದಾರರ ಹೆಸರು : ನಾಗರಾಜೇಗೌಡ
ತಂದೆಯ ಹೆಸರು : ತಿಮ್ಮೇಗೌಡ
ವಯಸ್ಸು : 57 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಅಗಸರಹಳ್ಳಿ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.

ದಿನಾಂಕಃ 09.03.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ**

ಚಾಸಾ 2 ಕೃಷ್ಣೇಗೌಡ ನನ್ನ ಭಾವ. ಚಾಸಾ 3 ನಾಗರತ್ನಮ್ಮ ನನ್ನ ಅಕ್ಕ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇದೆ. ಅವರು ನಮ್ಮ ಊರಿನವರು. ಸುಮಾರು 7-8 ವರ್ಷಗಳ ಹಿಂದೆ ಬೆಳಗ್ಗೆ 11.00 ಗಂಟೆಗೆ ನಾನು ಚಾಸಾ 2 ಮತ್ತು 3 ರವರು ಅಗಸರಹಳ್ಳಿಯಲ್ಲಿರುವ ನಮ್ಮ ಜಮೀನಿಗೆ ಉಳುಮೆ ಮಾಡಲು ಹೋಗಿದ್ದೆವು. 1 ರಿಂದ 8ನೇ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದರು. 1ನೇ ಆರೋಪಿ ಕುಳ್ಳೇಗೌಡ ಚಾಸಾ 2 ರವರಿಗೆ ಅವಾಚ್ಯವಾಗಿ ಬೋಳಿಮಗನೆ ಸೂಳೆಮಗನೆ ಎಂದು ಬೈದನು. 2ನೇ ಆರೋಪಿ ಲೋಕೇಶ ಚಾಸಾ 2 ರವರಿಗೆ ದೊಣ್ಣೆ ಮತ್ತು ಕುಡುಗೋಲಿನಿಂದ ತಲೆಗೆ ಹೊಡೆದರು. ಆರೋಪಿತರಾದ ನಾಗಮ್ಮ ಮತ್ತು ಭಾರತಿರವರು ಚಾಸಾ 3 ರವರನ್ನು ಹಿಡಿದು ಎಳೆದಾಡಿದರು. ಇನ್ನೊಬ್ಬ ಆರೋಪಿಯ ಹೆಸರು ನನಗೆ ನೆನಪಿಲ್ಲ. ನನಗೂ ಕೂಡ ಎಳೆದಾಡಿ ದೊಣ್ಣೆಯಿಂದ ಹಲ್ಲೆ ಮಾಡಿದರು. ಚಾಸಾ 2 ರವರು ಚಿಕಿತ್ಸೆಯನ್ನು ಮೈಸೂರಿನಲ್ಲಿ ಪಡೆದುಕೊಂಡರು. ಸಾಕ್ಷಿದಾರರಾದ ಸಣ್ಣತಮ್ಮೇಗೌಡ ಮತ್ತು ಗೋವಿಂದೇಗೌಡರು ಜಗಳವನ್ನು ಬಿಡಿಸಿದರು. ಆರೋಪಿತರು ಜಮೀನು ತಮಗೆ ಸೇರಿದ್ದು ಎಂದು ಗಲಾಟೆ ಮಾಡಿದರು. ಮೊದಲು ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ಹೋಗಿ ನಂತರ ಮೈಸೂರಿನಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದೇವೆ. ಪೊಲೀಸರಿಗೆ ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ದೂರನ್ನು ನಿಪಿ1 ಎಂದು ಗುರುತಿಸಲಾಯಿತು. ನಾನು ಸದರಿ ದೂರನ್ನು ಮರುದಿವಸ ನೀಡಿದೆನು. ನಾನು ದೂರು ನೀಡಿದ ನಂತರ ಪೊಲೀಸರು ಪಂಚನಾಮೆ ಮಾಡಲು ಸ್ಥಳಕ್ಕೆ ಬಂದಿದ್ದರು. ಪಂಚನಾಮೆ ಕಾಲಕ್ಕೆ ಸ್ಥಳವನ್ನು ನಾನೇ ತೋರಿಸಿದೆನು. ಪಂಚನಾಮೆಗೆ ನಾನು, ಗೋವಿಂದೇಗೌಡ ಮತ್ತು ಸಣ್ಣತಮ್ಮೇಗೌಡರು ರುಜು ಮತ್ತು ಹೆಬ್ಬೆಟ್ಟಿನ ಗುರುತನ್ನು ಮಾಡಿದ್ದೆವು. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನಿಪಿ2 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೊಲೀಸರು ನ್ಯಾಯಾಲಯದ ಮುಂದಿರುವ ಒಂದು ಕುಡುಗೋಲು ಮತ್ತು ಎರಡು ದೊಣ್ಣೆಗಳನ್ನು ವಶಪಡಿಸಿಕೊಂಡರು. ಕುಡುಗೋಲನ್ನು ಮುದ್ದೆಮಾಲು 1 ಎಂದು, 2 ದೊಣ್ಣೆಗಳನ್ನು ಒಟ್ಟಾಗಿ ಮುದ್ದೆಮಾಲು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎನ್.ಎನ್ ವಕೀಲರಿಂದ**

ಚಾಸಾ 2 ನನ್ನ ತಾಯಿಯ ತಮ್ಮ ಎಂದರೆ ಸರಿ. ಗಲಾಟೆಯಾದ ಜಮೀನು ನಮಗೆ ಸೇರಿಲ್ಲ ಎಂದರೆ

ಸರಿಯಲ್ಲ. ಚಾಸಾ 2 ಕೃಷ್ಣೇಗೌಡರವರು ಆರೋಪಿತರ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ಓಎಸ್ ನಂ. 211/2014 ರಲ್ಲಿ ದಾವೆಯನ್ನು ಹೂಡಿದ್ದಾರೆ ಅದು ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ಇನ್ನೊಂದು ದಾವೆಯನ್ನು ಕೂಡ ಚಾಸಾ 2 ಆರೋಪಿತರ ವಿರುದ್ಧ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 27/10 ಜಮೀನು ಆರೋಪಿತರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಮತ್ತು ಜಮೀನಿನ ಖಾತೆ ಆರೋಪಿತರ ಹೆಸರಿನಲ್ಲಿ ಇದೆ ಎಂದರೆ ಸರಿ. ನಾನು ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ದಾವೆಯನ್ನು ಕೂಡ ಹೂಡಿಲ್ಲ. ಆರೋಪಿತರು 50 ಸಾವಿರ ರೂಪಾಯಿಗಳಿಗೆ ಸದರಿ ಜಮೀನನ್ನು ಚಾಸಾ 2 ರವರಿಗೆ ಮಾರಾಟ ಮಾಡಲು ಒಪ್ಪಿದ್ದರು ಆದರೆ ಚಾಸಾ 2 ಹಣವನ್ನು ಆರೋಪಿತರಿಗೆ ಕೊಟ್ಟಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮತ್ತು ಮಾನ್ಯ ಎಪಿಪಿರವರು ಈ ಪ್ರಕರಣಕ್ಕೆ ವಿರುದ್ದ ಪ್ರಕರಣ ಸಾಕ್ಷಿದಾರರ ವಿರುದ್ಧ ಇರುತ್ತದೆ ಮತ್ತು ಅದರ ಸಂಖ್ಯೆ ಸಿಸಿ ನಂ. 715/2014 ಆಗಿರುತ್ತದೆ ಎಂದು ನ್ಯಾಯಾಲಯದ ಗಮನಕ್ಕೆ ತಂದ ಮೇರೆಗೆ ಮುಂದಿನ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.